ಅಧ್ಯಕ್ಷರು : ಮಾನ್ಯ ಮಂತ್ರಿಗಳೆ, ಅವರು ಕೇಳಿರುವ ಪ್ರಶ್ನೆಗೆ ಉತ್ತರ ಕೊಟ್ಟಿದ್ದೀರಿ. ಈಗ ಉಪ ಪ್ರಶ್ನೆಯನ್ನು ಅವರು ಕೇಳಿಲ್ಲ. ಉತ್ತರ ಹೇಳುವುದಕ್ಕೆ ಬೇರೆ ರೂಪದಲ್ಲಿ ಕೇಳಿದರೆ ಉತ್ತರ ಕೊಡುವುದಾಗಿ ಹೇಳಿ. ಈಗ ಶ್ರೀ ಸೋಮಶೇಖರ್ ರವರ ಪ್ರಶ್ನೆ.

ಜೆ.ಟಿ.ಓ ಗಳ ಹಾಗೂ ಕಾರಣೀಕೃತ ಅಧಿಕಾರಿಗಳ ವಿರುದ್ಧ ಜರುಗಿಸಿದ ಕ್ರಮ

15 (66) ಶ್ರೀ ಸೋಮಶೇಖರ್ ಎಂ.ಕೆ. (ಕೃಷ್ಣರಾಜ):– ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) 2010ರ ಕೆ.ಪಿ.ಎಸ್.ಸಿ. ಮೂಲಕ ನಡೆದ 402 ಕಿ.ತ.ಅ. ಹುದ್ದೆ ನೇಮಕಾತಿಯಲ್ಲಿ ನಕಲಿ ಅನುಭವ ಪ್ರಮಾಣ ಪತ್ರ ಸಲ್ಲಿಸಿದವರಿಗೆ ಅಕ್ರಮವಾಗಿ ನೇಮಕಾತಿ ನೀಡಿರುವ ಹಗರಣದ ಕುರಿತು ಈಗಾಗಲೇ ಸಿ.ಐ.ಡಿ. ತನಿಖಾ ವರದಿ ಸಲ್ಲಿಕೆಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಸಿ.ಐ.ಡಿ ತನಿಖಾ ವರದಿಯ ಪ್ರತಿಯನ್ನು ಒದಗಿಸುವುದು ;

(ಆ) 2010ರಲ್ಲಿ ನಕಲಿ ಅನುಭವ ಪ್ರಮಾಣ ಪತ್ರ ನೀಡಿ ಅಕ್ರಮವಾಗಿ ಸೇವೆಗೆ ಸೇರಿದ ಕಿ.ತ.ಅ.ಗಳ ಬಗ್ಗೆ ಈ ಮೊದಲು ಸದನದಲ್ಲಿ ಇಲಾಖೆಯಿಂದ ಪರಿಶೀಲಿಸಲ್ಪಟ್ಟಿರುವ ಕೆಲವು ಅಭ್ಯರ್ಥಿಗಳ ಪೈಕಿ 78 ಕಿ.ತ.ಅ ಗಳ ಅನುಭವ ಪ್ರಮಾಣ ಪತ್ರಗಳು ನಕಲಿಯೆಂದು ಮೇಲ್ನೋಟಕ್ಕೆ ಸಾಬೀತಾಗಿದೆ ಎಂದು ತಿಳಿಸಲಾಗಿತ್ತು. ಈ 78 ಕಿ.ತ.ಅ.ಗಳ ವಿರುದ್ಧ ಕೈಗೊಂಡ ಕ್ರಮದ ಬಗ್ಗೆ ವಿವರಗಳನ್ನು ಒದಗಿಸುವುದು ; ಇಲ್ಲವಾದಲ್ಲಿ ಕಾರಣಗಳನ್ನು ನೀಡುವುದು ;

(ಇ) ಸಿ.ಐ.ಡಿ. ವರದಿಯ ಅನ್ವಯ ನಕಲಿ ಅನುಭವ ಪ್ರಮಾಣ ಪತ್ರ ನೀಡಿ ಅಕ್ರಮವಾಗಿ ಸೇವೆಗೆ ಸೇರಿದ ಕಿ.ತ.ಅ.ಗಳ ಹಾಗೂ ಕಾರಣೀಕೃತ ಅಧಿಕಾರಿಗಳ ವಿರುದ್ಧ ಜರುಗಿಸಿದ ಕ್ರಮದ ವಿವರಗಳನ್ನು ಒದಗಿಸುವುದು ; ಇಲ್ಲವಾದಲ್ಲಿ ಕಾರಣಗಳನ್ನು ನೀಡುವುದು?

ಶ್ರೀ ಪಿ.ಟಿ. ಪರಮೇಶ್ವರ್ ನಾಯ್ಕ್ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು) :–

(ಅ) ಬಂದಿದೆ. ತನಿಖಾ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

(ಆ) ಅನುಭವ ಪ್ರಮಾಣ ಪತ್ರಗಳು ನಕಲಿ ಎಂದು ಮೇಲ್ನೋಟಕ್ಕೆ ಕಂಡು ಬಂದಿರುವ 76 ಕಿರಿಯ ತರಬೇತಿ ಅಧಿಕಾರಿಗಳಿಗೆ ನೋಟೀಸ್ ಜಾರಿಮಾಡಲಾಗಿದೆ. ತದ ನಂತರ ಪ್ರಕರಣವನ್ನು ಸರ್ಕಾರವು ಸಿ.ಐ.ಡಿ. ಗೆ ವಹಿಸಿದ್ದು, ವರದಿಯು ಕಾರ್ಮಿಕ ಇಲಾಖೆಗೆ ಅಧಿಕೃತವಾಗಿ ದಿನಾಂಕ: 29.05.2014 ರಂದು ಸ್ವೀಕೃತವಾಗಿರುತ್ತದೆ.

(ಇ) ಸಿಐ.ಡಿ.ಯ ವರದಿಯು ಸರ್ಕಾರದ ಪರಿಶೀಲನೆ ಪೂರ್ಣಗೊಂಡ ಕೂಡಲೇ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

ಶ್ರೀ ಸೋಮಶೇಖರ್ ಎಂ.ಕೆ. : ಮಾನ್ಯ ಅಧ್ಯಕ್ಷರೆ, KPSC ಮುಖಾಂತರ ತೆಗೆದುಕೊಂಡಂತಹ ಜೆ.ಟಿ.ಓ.ಗಳ certificate fake ಎಂದು ಬಂದಿದೆ. ಅದರ ಬಗ್ಗೆ ಸಿ.ಐ.ಡಿ. ವರದಿ ಇದೆ. ಅದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಹೇಳಬೇಕು.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ : ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರು ಪ್ರಸ್ತಾಪ ಮಾಡಿರುವ ವಿಷಯ ಏನಿದೆ, ಈಗಾಗಲೇ ಸಿ.ಐ.ಡಿ. ತನಿಖೆ ಮಾಡಿ ದಿ: 29.05.2014 ರಂದು ಸರ್ಕಾರಕ್ಕೆ ವರದಿ ನೀಡಿದೆ. ಅದನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ ಪೂರ್ಣ ವಿವರವನ್ನು ಮಾನ್ಯ ಶಾಸಕರಿಗೆ ಒದಗಿಸುತ್ತೇನೆ.

ಅಧ್ಯಕ್ಷರು : ಮುಂದಿನ ಕ್ರಮ ಏನು ಎಂದು ಕೇಳುತ್ತಿದ್ದಾರೆ.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ: ಮೊನ್ನೆ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ವರದಿಯನ್ನು ಅಧ್ಯಯನ ಮಾಡಿ ಯಾರು ತಪ್ಪಿತಸ್ಥರಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಪ್ರಶ್ನೋತ್ತರ ಅವಧಿ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಮತ್ತು ಪಶುಸಂಗೋಪನಾ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 23.06.2014 ರ 1ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 60 ಪ್ರಶ್ನೆಗಳ ಪೈಕಿ 56 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಗಿದೆ. ಈಗ ಸದನವನ್ನು ಮುಂದೂಡಿ ಮಧ್ಯಾಹ್ನ 03.45 ಗಂಟೆಗೆ ಪುನಃ ಸೇರುವುದು.

(ಅನುಬಂಧ – 1)

(ಮಧ್ಯಾಹ್ನ 02 ಗಂಟೆ 38 ನಿಮಿಷಕ್ಕೆ ಸದನವನ್ನು ಮುಂದೂಡಿ ಪುನ: ಮಧ್ಯಾಹ್ನ 3 ಗಂಟೆ 45 ನಿಮಿಷಕ್ಕೆ ಸೇರಲು ನಿರ್ಧರಿಸಲಾಯಿತು)

(ಸದನವು ಭೋಜನ ವಿರಾಮದ ನಂತರ 3.00 ಗಂಟೆ 58 ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)